ತಿ. ನರಸೀಪುರದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

<u>ಸಿಸಿ ಸಂಖ್ಯೆ 524/2017</u>

CW-10/PW-1

| | | |
|---|---|---|
| ಹೆಸರು | : | ವಿ.ಎಸ್.ಶಶಿಕುಮಾರ್ |
| ತಂದೆ/ಗಂಡನ ಹೆಸರು | : | ಶ್ರೀಕಂಠ |
| ವಯಸ್ಸು | : | 41 ವರ್ಷ |
| ವೃತ್ತಿ | : | ಪೊಲೀಸ್ ನಿರೀಕ್ಷಕರು |
| ವಾಸ ಸ್ಥಳ | : | ಮೈಸೂರು ದಕ್ಷಿಣ ಪೊಲೀಸ್ ಠಾಣೆ |
| ದಿನಾಂಕ | : | **24-01-2023** |

**ಸಾಕ್ಷಿದಾರರ ವಿನಂತಿಯ ಮೇರೆಗೆ ಮುಖ್ಯ ವಿಚಾರಣೆಯನ್ನು ವಿಡಿಯೊ ಮೂಲಕ ಕರೆಯಿಸಲಾಯಿತು. ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ಅಡಿಯಲ್ಲಿ ಸಾಕ್ಷಿದಾರರ ವಿಚಾರಣೆ.**

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ನಾನು ಫೆಬ್ರವರಿ 2014 ರಿಂದ ಜನವರಿ 2015 ರವರೆಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 28.07.2014 ರಂದು ಬೆಳಿಗ್ಗೆ 10.15 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ದೊಡ್ಡೆಬಾಗಿಲು ಗ್ರಾಮದ ಬಳಿಯಿರುವ ಕಾವೇರಿ ನದಿಯ ಬಳಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿತು. ಆ ಮೇರೆಗೆ ನಾನು ಮತ್ತು ಚಾಸಾ-6 ರಿಂದ 8 ರವರು ಇಲಾಖಾ ವಾಹನದಲ್ಲಿ ಚಾಸಾ-9 ರವರೊಂದಿಗೆ ಪಂಚಾಯ್ತಿದಾರರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬೆಳಿಗ್ಗೆ 10.45 ಗಂಟೆ ಸಮಯಕ್ಕೆ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡುತ್ತಿದ್ದಾಗ ನದಿ ಕಡೆಯಿಂದ ಕ್ಯಾಂಟರ್ ವಾಹನದ ಮೂಲಕ ಮರಳನ್ನು ತುಂಬಿಕೊಂಡು ಬರುತ್ತಿರುವುದನ್ನು ನೋಡಿ ನಿಲ್ಲಿಸಲಾಗಿ ವಾಹನ ಚಾಲಕನು ಅದನ್ನು ಸ್ಥಳದಲ್ಲಿಯೇ ಬಿಟ್ಟು ಓಡಿಹೋದನು. ಪಂಚರ ಸಮಕ್ಷಮ ಪರಿಶೀಲಿಸಲಾಗಿ ವಾಹನ ಸಂಖ್ಯೆ ಕೆಎ-51-ಎ-2405 ಆಗಿದ್ದು ಅದರಲ್ಲಿ ಮರಳು ತುಂಬಿದ್ದು ಕಂಡುಬಂದಿರುತ್ತದೆ. ಆ ವೇಳೆಗೆ ಅಕ್ರಮವಾಗಿ ಮರಳನ್ನು ಸಾಗಾಟ ಮಾಡುತ್ತಿದ್ದಾರೆ ಎಂದು

ಖಚಿತಪಡಿಸಿಕೊಂಡು ವಾಹನವನ್ನು ಪಂಚರ ಸಮಕ್ಷಮ 10.45 ರಿಂದ 11.30 ಗಂಟೆಯವರೆಗೆ ಮಹಜರು ಮೂಲಕ ಅಮಾನತ್ತು ಪಡಿಸಿಕೊಂಡಿದ್ದೆನು. ನಂತರ ಠಾಣೆಗೆ ಹಿಂದಿರುಗಿ ಸ.ತ. ವರದಿ ತಯಾರಿಸಿ ಮಧ್ಯಾಹ್ನ 12.15 ಗಂಟೆಗೆ ಠಾಣಾ ಮೊಕದ್ದಮೆ ಸಂಖ್ಯೆ 199/2014 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವ.ನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಅಮಾನತ್ತುಪಡಿಸಿಕೊಂಡ ವಾಹನವನ್ನು ಮಾಲುಪಟ್ಟಿಗೆ ಅಳವಡಿಸಿರುತ್ತೇನೆ. ಅದೇ ದಿನ ಚಾಸಾ-2, 3 ಮತ್ತು 6 ರಿಂದ 9 ಇವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದೇನೆ.

ದಿನಾಂಕ 13/08/2014 ರಂದು ಆರೋಪಿತನಾದ ರಾಜೇಶ್ ಸ್ವತಃ ಠಾಣೆಗೆ ಹಾಜರಾದ ಮೇರೆಗೆ ಆತನಿಗೆ ನೋಟೀಸು ಜಾರಿ ಮಾಡಿರುತ್ತೇನೆ. ಅದೇ ಸಮಯದಲ್ಲಿ ಆರೋಪಿತನು ಅಕ್ರಮವಾಗಿ ಮರಳು ತುಂಬಿದ ಸ್ಥಳವನ್ನು ತೋರಿಸುತ್ತೇನೆ ಎಂದು ತಿಳಿಸಿರುತ್ತಾನೆ. ಆ ಮೇರೆಗೆ ಚಾಸಾ-4 ಮತ್ತು 5 ರವರನ್ನು ಕರೆದುಕೊಂಡು ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರು ಕ್ರಮ ಜರುಗಿಸಿರುತ್ತೇನೆ. ಪ್ರಕರಣದ ಮುಂದುವರಿದ ತನಿಖೆಯನ್ನು ಕಡತ ಸಮೇತವಾಗಿ ಚಾಸಾ-10 ರವರಿಗೆ ವಹಿಸಿಕೊಟ್ಟಿರುತ್ತೇನೆ.

ನಾನು ಸ್ಥಳದಲ್ಲಿ ಜರುಗಿಸಿದ ಪಂಚನಾಮೆಯ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಆರೋಪಿತನು ತೋರಿಸಿದ ಮರಳು ತುಂಬಿದ ಸ್ಥಳದಲ್ಲಿ ಜರುಗಿಸಿದ ಪಂಚನಾಮೆಯ ಪ್ರತಿಯನ್ನು ಈಗ ನಿ.ಪಿ.2 ಎಂದು ಗುರುತಿಸಲಾಯಿತು. ನಾನು ಸರ್ಕಾರದ ಪರವಾಗಿ ನೀಡಿರುವ ದೂರಿನ ಪ್ರತಿಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟ ಪ್ರ.ವ.ವ.ದ ಪ್ರತಿಯನ್ನು ನಿ.ಪಿ.4 ಎಂದು ಗುರುತಿಸಲಾಯಿತು.

ಆರೋಪಿತನು ಈಗ ತಲೆಮರೆಸಿಕೊಂಡಿದ್ದು ಆತನನ್ನು ನೋಡಿದರೆ ಗುರುತಿಸುತ್ತೇನೆ. ಅದೇ ರೀತಿ ನಾನು ಅಮಾನತ್ತು ಮಾಡಿಕೊಂಡ ಮರಳು ತುಂಬಿದ ವಾಹನವನ್ನು ಕೂಡ ನೋಡಿದರೆ ಗುರುತಿಸುತ್ತೇನೆ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ತಿ. ನರಸೀಪುರ.